ಹಂದಿ ಜ್ವರ, ಇಲಿ ಜ್ವರ, ಮಂಗ ಜ್ವರ... ಹೀಗೆ ಪ್ರಾಣಿಗಳ ಹೆಸರಿಗೆ ಸೇರಿಕೊಂಡು ಬರುವ ರೋಗಗಳ ಪೈಕಿ ಸದ್ಯ ಸುದ್ದಿಯಲ್ಲಿರುವುದು ಮಂಗನ ಕಾಯಿಲೆ. ಮಲೆನಾಡಿನ ಜನರ ನಿದ್ದೆಗೆಡಿಸುತ್ತಿರುವ ಈ ಕಾಯಿಲೆ ಕುಟುಂಬದ ನೆಮ್ಮದಿಯನ್ನೂ ಕೆಡಿಸುತ್ತಿದೆ.

## ರೋಗದ ಲಕ್ಷಣಗಳು

ಮಂಗನಕಾಯಿಲೆಗೆ ತುತ್ತಾದವರಿಗೆ 8ರಿಂದ 10 ದಿನಗಳ ಕಾಲ ಎಡೆಬಿಡದೆ ವಿಪರೀತ ಜ್ವರ ಬರುತ್ತದೆ. ತೀವ್ರವಾದ ತಲೆನೋವು (ತಲೆಯ ಮುಂಭಾಗದಲ್ಲಿ) ನಡುಕ, ಚಳಿ, ಮೈಕೈ ನೋವು ಇರುತ್ತದೆ. ವಾಕರಿಕೆ, ವಾಂತಿ, ಸ್ನಾಯು ಸೆಳೆತ, ವಿಪರೀತ ನಿಶಕ್ತಿ, ನಿದ್ರಾಹೀನತೆ, ಅತಿಯಾದ ಬಾಯಾರಿಕೆ, ವಿಪರೀತ ಸೊಂಟ ನೋವು.. ಹೀಗೆ ಎಲ್ಲಾ ಸೋಂಕು ಜ್ವರಗಳಂತೆ ಈ ಜ್ವರ ಕಾಡುತ್ತದೆ. ಜ್ವರ ಬಂದು ಒಂದೆರಡು ವಾರಗಳ ಬಳಿಕ ಮೂಗಿನಿಂದ ರಕ್ತ ಸೋರುವುದು, ಬಾಯಿಯ ವಸಡುಗಳಿಂದ, ಗುದದ್ವಾರದಿಂದ ರಕ್ತಸ್ರಾವ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ರಕ್ತ ವಾಂತಿಯಾಗುವ ಸಾಧ್ಯತೆಯೂ ಇರುತ್ತದೆ. ರಕ್ತದಲ್ಲಿ ರಕ್ತ ತಟ್ಟೆಗಳ ಸಂಖ್ಯೆ ಇಳಿಮುಖವಾಗುವುದೇ ಇದಕ್ಕೆ ಕಾರಣ. ಮೆದುಳಿನ ಒಳಗೆ ಆಂತರಿಕ ರಕ್ತಸ್ರಾವವಾದಲ್ಲಿ, ಲಕ್ವ ಅಥವಾ ಪಾರ್ಶ್ವವಾಯು ಉಂಟಾಗುವ ಸಾಧ್ಯತೆಯೂ ಇದೆ. ಆದರೆ ಸಕಾಲದಲ್ಲಿ ಗುರುತಿಸಿ ಚಿಕಿತ್ಸೆ ನೀಡಿದಲ್ಲಿ 2ರಿಂದ 3ವಾರಗಳಲ್ಲಿ ಗುಣಮುಖರಾಗಬಹುದು. ಪೂರ್ತಿಯಾಗಿ ಗುಣಮುಖರಾಗಲು 6 ರಿಂದ 8 ತಿಂಗಳುಗಳೇ ಬೇಕಾಗಬಹುದು.

## ಹೇಗೆ ಹರಡುತ್ತದೆ?

ಫ್ಲಾವಿ ವೈರಸ್ ಎಂಬ ಗುಂಪಿಗೆ ಸೇರಿದ ವೈರಾಣು ಉಣ್ಣೆಗಳ (ಒಂದು ಬಗೆಯ ಹೇನು) ಮುಖಾಂತರ ಹರಡುತ್ತದೆ. ಮಂಗ, ಅಳಿಲು, ಮುಳ್ಳುಹಂದಿ, ಇಲಿಗಳು,.. ಮುಂತಾದ ಪ್ರಾಣಿಗಳ ಮೇಲೆ ಬದುಕುವ ಈ ವೈರಾಣುಗಳು ಈ ಪ್ರಾಣಿಗಳ ರಕ್ತವನ್ನು ಉಣ್ಣೆಗಳು ಹೀರಿದಾಗ ಉಣ್ಣೆಗಳ ದೇಹಕ್ಕೆ ಸೇರಿಕೊಳ್ಳುತ್ತದೆ. ಉಣ್ಣೆಗಳು ಮನುಷ್ಯನನ್ನು ಕಡಿದಾಗ ಈ ವೈರಾಣು ಮನುಷ್ಯನ ದೇಹಕ್ಕೆ ಸೇರಿಕೊಳ್ಳುತ್ತದೆ. ಉಣ್ಣೆ ಕಡಿತದ ಕೆಲವೇ ಗಂಟೆಗಳಲ್ಲಿ ದೇಹಕ್ಕೆ ಸೇರಿ ನೇರವಾಗಿ ಮೆದುಳಿನ ಮೇಲೆ ದಾಳಿ ಮಾಡುತ್ತದೆ. ಮೆದುಳಿನ ಜೀವಕೋಶಗಳಲ್ಲಿ ತನ್ನ ವಂಶಾಭಿವೃದ್ಧಿ ಮಾಡಿಕೊಂಡು ಮೆದುಳಿನ ಜೀವಕೋಶಗಳನ್ನು ಹಾಳುಗೆಡವಿ ತನ್ನ ಆರ್ಭಟವನ್ನು ಆರಂಭಿಸುತ್ತದೆ.

## ಮುಂಜಾಗರೂಕತೆ ಕ್ರಮಗಳು

ಜ್ವರ ಕಂಡು ಬಂದ ಕೂಡಲೇ ಸಮೀಪದ ಆರೋಗ್ಯ ಕೇಂದ್ರ ಸಂಪರ್ಕಿಸಬೇಕು. ಕಾಯಿಲೆ ಬಾಧಿತ ಪ್ರದೇಶದವರು ಕಾಡಿಗೆ ಹೋಗುವುದಾದರೆ ಉಣ್ಣೆ ನಿರೋಧಕ ತೈಲವನ್ನು ಕೈಕಾಲುಗಳಿಗೆ ಹಚ್ಚಿಕೊಳ್ಳಬೇಕು. ಕಾಡಿನಿಂದ ಬಂದ ತಕ್ಷಣ ಸಾಬೂನು ಹಚ್ಚಿ ಬಿಸಿನೀರಿನಲ್ಲಿ ಸ್ನಾನ ಮಾಡಬೇಕು. ಧರಿಸಿದ ಬಟ್ಟೆಯನ್ನು ಬಿಸಿ ನೀರಿನಿಂದ ಸ್ವಚ್ಛ ಮಾಡಬೇಕು.

ಅಲ್ಲದೆ ಮಂಗನ ಕಾಯಿಲೆ ದೃಢಪಟ್ಟ ಪ್ರದೇಶಗಳ ನಿವಾಸಿಗಳು ಕಾಯಿಲೆ ನಿರೋಧಿ ಲಸಿಕೆ ಬಳಸುವ ಮೂಲಕ ಮುನ್ನೆಚ್ಚರಿಕೆ ವಹಿಸಬೇಕು. ಮಂಗನ ಕಾಯಿಲೆ ಇರುವ ಕಾಡು ಪ್ರದೇಶಕ್ಕೆ ಸೌದೆ ತರಲು, ಜೇನು ಮತ್ತು ಇತರ ಕಾಡು ತೃತ್ತಿ ಸಂಗ್ರಹಿಸಲು, ದನ ಮೇಯಿಸಲು ಹೋಗುವುದನ್ನು ಒಂದೆರಡು ತಿಂಗಳು ನಿಲ್ಲಿಸಬೇಕು. ಮಂಗ ಸತ್ತ 50 ಮೀಟರ್ ಪರಧಿಯಲ್ಲಿ ಮೆಲಾಥಿಯನ್ ಎಂಬ ಕೀಟನಾಶಕ ಔಷಧಿ ಸಿಂಪಡಿಸಿ ಉಣ್ಣೆಗಳನ್ನು ನಾಶಪಡಿಸಿದಲ್ಲಿ ರೋಗ ಹರಡುವುದಿಲ್ಲ. ಮಂಗನ ಕಾಯಿಲೆಗೆ ಇರುವ ಲಸಿಕೆ ಹಾಕಿ ರೋಗ ಬರದಂತೆ ತಡೆಯಲಾಗುತ್ತದೆ. ಸೋಂಕು ತಗುಲಿದವರಿಗೆ ಈ ಲಸಿಕೆ ಹಾಕಿದರೆ ಪ್ರಯೋಜನವಿರುವುದಿಲ್ಲ. ಸೋಂಕು ತಗಲದವರಿಗೆ ಮಾತ್ರವೇ 2 ಸುತ್ತು ಲಸಿಕೆ ಹಾಕಲಾಗುತ್ತದೆ.

## ಚಿಕಿತ್ಸೆ ಹೇಗೆ?

ರೋಗದ ಲಕ್ಷಣಗಳು ಮತ್ತು ತೀವ್ರತೆಗೆ ಅನುಗುಣವಾಗಿ ರೋಗಿಗೆ ಚಿಕಿತ್ಸೆ ನೀಡಲಾಗುತ್ತದೆ. ವಿಪರೀತ ಸುಸ್ತು, ಜ್ವರ ಮತ್ತು ನಿಶಕ್ತಿ ಇದ್ದಲ್ಲಿ, ಒಳರೋಗಿಯಾಗಿ ಚಿಕಿತ್ಸೆ ನೀಡಲಾಗುತ್ತದೆ. ಎಲ್ಲಾ ರೀತಿಯ ಸೋಂಕು ಜ್ವರಗಳ ಚಿಕಿತ್ಸೆಯಂತೆ ಸಾಕಷ್ಟು ದ್ರವಾಹಾರ, ವಿಶ್ರಾಂತಿ ಮತ್ತು ಜ್ವರ ನಿಯಂತ್ರಿಸಲು ಪ್ಯಾರಸಿಟಮಲ್ ಔಷಧಿ ನೀಡಲಾಗುತ್ತದೆ. ರಕ್ತನಾಳಗಳ ಮುಖಾಂತರ ಪ್ರೊಟೀನ್ ಮತ್ತು ಪೋಷಕಾಂಶಯುಕ್ತ ದ್ರಾವಣ ನೀಡಿ ಉಪಚರಿಸಲಾಗುತ್ತದೆ. ರಕ್ತತಟ್ಟೆಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದಲ್ಲಿ ರಕ್ತ ಮರುಪೂರಣ ಅಥವಾ ರಕ್ತ ತಟ್ಟೆಗಳ ಮರುಪೂರಣ ನೀಡಲಾಗುತ್ತದೆ. ಆರಂಭಿಕ ಹಂತದಲ್ಲಿ ಗುರುತಿಸಿ ಸೂಕ್ತ ಚಿಕಿತ್ಸೆಯನ್ನು ಸಕಾಲದಲ್ಲಿ ನೀಡಿದಲ್ಲಿ ಸಂಪೂರ್ಣ ಗುಣಮುಖರಾಗುವ ಎಲ್ಲಾ ಸಾಧ್ಯತೆ ಇರುತ್ತದೆ.

## ತಪ್ಪು ಕಲ್ಪನೆಗಳು

ಮಂಗ ಜ್ವರ ಬಂದ ರೋಗಿ ಮಂಗನಂತೆ ಕಿರುಚುತ್ತಾನೆ, ಪರಚುತ್ತಾನೆ ಮತ್ತು ವರ್ತಿಸುತ್ತಾನೆ ಎಂಬುದು ಶುದ್ಧ ಸುಳ್ಳು. ಮಂಗನ ಕಾಯಿಲೆ ಮಂಗ ಕಚ್ಚುವುದರಿಂದ ಹರಡುವುದಿಲ್ಲ. ಮಂಗನಿಂದ ನೇರವಾಗಿ ಮನುಷ್ಯನಿಗೆ ಹರಡುವುದೇ ಇಲ್ಲ. ಉಣ್ಣೆಗಳ ಮುಖಾಂತರವೇ ಈ ವೈರಾಣು ಹರಡುತ್ತದೆ. ಆದರೆ ಮಂಗ ಕಚ್ಚಿದರೆ ರೇಬಿಸ್ ಬರದಂತೆ ಚುಚ್ಚುಮದ್ದು ತೆಗೆದುಕೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ದೇವರು ಮುನಿದು ಈ ರೋಗ ಬಂದಿದೆ ಎಂದು ಶಾಂತಿ, ಹೋಮ, ಹವನ ಮಾಡಿಸುವುದು ಕೂಡಾ ಇದೆ.

ಮಂಗ ಕುಡಿದ ನೀರಿನಿಂದಲೂ ಈ ರೋಗ ಹರಡುವುದಿಲ್ಲ. ಮಂಗನ ಎಂಜಲಿನಲ್ಲಿ ಈ ವೈರಾಣು ಇರುವುದಿಲ್ಲ. ಈ ಕಾರಣದಿಂದ ಮಂಗ ಕುಡಿದ ಕೆರೆಯ ನೀರನ್ನು ಸೇವಿಸಬಹುದು. ಅದೇ ರೀತಿ ಮಂಗ ತಿಂದ ಅಥವಾ ಕಚ್ಚಿದ ಹಣ್ಣಿನಿಂದಲೂ ಈ ರೋಗ ಹರಡುವ ಸಾಧ್ಯತೆ ಅತೀ ಕಡಿಮೆ ಇರುತ್ತದೆ. ಮಂಗಗಳನ್ನು ಸಾಮೂಹಿಕವಾಗಿ ಕೊಲ್ಲುವುದರಿಂದ ಮಂಗನ ಕಾಯಿಲೆ ನಿಯಂತ್ರಿಸಬಹುದು ಎಂಬುದು ಕೂಡ ಒಪ್ಪುವಂತಹ ಮಾತಲ್ಲ.



## ಹಿನ್ನೆಲೆ

1957ರಲ್ಲಿ ಶಿವಮೊಗ್ಗ ಜಿಲ್ಲೆಯ ಮಲೆನಾಡಿನ ಕಾಡಿನ ಬಳಿಯ ಕ್ಯಾಸನೂರ್ ಎಂಬ ಹಳ್ಳಿಯಲ್ಲಿ ಈ ರೋಗ ಮೊದಲು ಕಾಣಿಸಿಕೊಂಡಿತ್ತು. ಈ ಕಾರಣದಿಂದಾಗಿ ಈ ರೋಗವನ್ನು ಕ್ಯಾಸನೂರ್ ಫಾರೆಸ್ಟ್ ಡಿಸೀಸ್ ಅಂತ ಕರೆಯಲಾಗಿತ್ತು. ಸಾವಿರಾರು ಮಂಗಗಳು ಈ ರೋಗದಿಂದ ಬಳಲಿ ಸಾವಿಗೀಡಾದ ಕಾರಣದಿಂದಾಗಿ ಈ ಜ್ವರಕ್ಕೆ ಮಂಗನ ಕಾಯಿಲೆ, ಮಂಗ ಜ್ವರ ಎಂಬ ಹೆಸರು ಬಂದಿದೆ. 1982ರಲ್ಲಿ ಬೆಳ್ತಂಗಡಿ ತಾಲೂಕಿನಲ್ಲಿ ಹಲವಾರು ಮಂದಿಗೆ ಈ ಸೋಂಕು ತಗಲಿ ಸುಮಾರು 500ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದರು. ಆಗ ಈ ಕಾಯಿಲೆಗೆ ಸೂಕ್ತವಾದ ಉಪಚಾರ ಮಾಡುವ ಕ್ರಮವಾಗಲಿ, ಔಷಧಿಯಾಗಲಿ ತಿಳಿದಿರಲಿಲ್ಲ.